ಶ್ರೀ ಜಿ. ಪುಟ್ಟಸ್ವಾಮಿ.—ಆ ಆಸ್ಪತ್ರೆಗೆ ಹೊರರೋಗಿಗಳೂ ಬರುತ್ತಾರೆ. ಹೊರರೋಗಿಗಳನ್ನು ನೋಡಲು ಪ್ರತ್ಯೇಕ ಡಾಕ್ಟರ್ ಇಲ್ಲದೇ ಇರುವುದರಿಂದ ಅಲ್ಲಿರತಕ್ಕ ತಜ್ಞರಾದ ಡಾಕ್ಟರೇ ಹೊರರೋಗಿಗಳನ್ನೂ ನೋಡಬೇಕಾಗಿದೆ. ಇದರಿಂದ ಚಿಲ್ಡ್ರನ್ ಸ್ಪೆಷಲಿಸ್ಟ್ ಮತ್ತು ಇತರ ತಜ್ಞರೇನಿದ್ದಾರೆ ಇವರೇ ಔಟ್‌ಪೇಷೆಂಟ್‌ನ್ನೂ ನೋಡಬೇಕಾಗಿರುವುದರಿಂದ ತೊಂದರೆಯಾಗುತ್ತಿದೆ. ಆದ್ದರಿಂದ ಔಟ್‌ಪೇಷೆಂಟ್‌ಗೆ ಪ್ರತ್ಯೇಕವಾದ ಡಾಕ್ಟರನ್ನು ನೇಮಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಾ ಆಸ್ಪತ್ರೆಗಳಲ್ಲಿ ನಡಯುತ್ತಿರತಕ್ಕ ಕೆಲಸ ಇದು. ಔಟ್‌ಪೇಷೆಂಟ್ ಬರತಕ್ಕ ಕಾಲದಲ್ಲಿ ಔಟ್‌ಪೇಷೆಂಟನ್ನು ನೋಡುತ್ತಾರೆ, ಇನ್‌ಪೇಷೆಂಟನ್ನು ನೋಡತಕ್ಕ ಕಾಲದಲ್ಲಿ ಇನ್‌ಪೇಷೆಂಟನ್ನೂ ನೋಡುತ್ತಾರೆ.

Expenditure Incurred by Animal Husbandry Department in Shimoga District

232. SRI KONANDUR LINGAPPA (Thirthahalli).—Will the Minister of State for Animal Husbandry be pleased to state:

(*a*) the expenditure incurred by the Animal Husbandry Department in Thirthahalli Constituency of Shimoga District (Thirthahalli Taluk and Nagar Hobli of Hosanagar Taluk) during the last 5 years *i.e.*, 1972-73 to 1976-77;

(*b*) the kind of work for which the expenditure is incurred and is being incurred ?

SRI B. G. BANAKAR (Minister of State for Animal Husbandry).—

(*a*) Expenditure incurred during last five years *i.e.*, from 1972-73 to 1976-77.

	Thirthahalli Taluk	*Nagar Hobli of Hosanagar Taluk*
1972-73	1,20,160-73	11,127-50
1973-74	1,40,918-47	15,672-06
1974-75	1,75,334-05	18,861-35
1975-76	2,31,975-38	26,392-20
1976-77	1,02,360-45	12,200-10

(*b*) Purpose for which expenditure has been incurred :

1. Thirthahalli Talak :

	Pay and Allowances	*Other Charges including Hospital Necessaries*
1972-73	97,699-78	22,460-95
1973-74	1,14 115-89	26,83?-58
1974-75	1,38,993-63	24 307-68
		*12 030-74
		Equipment
1975-76	1,52,270-11	29,112 32
	*19,155-09	*8 937-86
		*22,500-00
1976-77	90,375-69	2,593-55
	*9,359-52	*32-00

*Expenditure under Western Ghat Development.

2. Nagar Hobli of Hosanagar Taluk :

1972-73	9,292-50	1,835-00
1973-74	13,922-06	1,750-00
1974-75	14,511-35	4 350-00
1975-76	23,792-20	4,100-00
1976-77	9,635-10	2 565-00

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ ತಾವು ಇಲ್ಲಿ ಕೊಟ್ಟಿರುತಕ್ಕ ವಿವರ ನೋಡಿದರೆ ಆಸ್ಪತ್ರೆಯ ಸಿಬ್ಬಂದಿ ವೇತನ ಮತ್ತು ಭತ್ಯಗಳಿಗೇ ಎಲ್ಲಾ ಹಣವನ್ನು ಖರ್ಚು ಮಾಡಿದ್ದೀರೆಯೇ ಹೊರತು ಆಸ್ಪತ್ರೆ ಅಗತ್ಯಗಳ ಪೂರೈಕೆಗೆ ಹೆಚ್ಚು ಹಣ ಖರ್ಚು ಮಾಡಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ಹೋಗರಾಡಿಸಲು ಏನಾದರೂ ಪ್ರಯತ್ನ ಮಾಡುತ್ತೀರಾ?

† ಶ್ರೀ ಬಿ. ಜಿ. ಬಣಕಾರ್.—ಸಭಾಧ್ಯಕ್ಷರೆ, 1972-73ನೇ ಇಸವಿಯಲ್ಲಿ 77 percent has been spent for salary and allowances, 23% has been spent for medicines; so also for the year 1976-77 so for 97% has been spent for the purpose of pay and allowances. Where as only 3 per cent has been spent for the purpose of medicines. Major portion of the budget is spent for salaries and allowances of officers-that we cannot help.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಸರ್ಕಾರದ ಹಣ ಪೂರ್ತಿವೇತನ ಮತ್ತು ಭತ್ಯಗಳಿಗೇ ಖರ್ಚಾಗುತ್ತಿದೆಯೇ ಹೊರತು ಆಸ್ಪತ್ರೆಗೆ ಬೇಕಾದಂತಹ ಔಷಧಿಗಳು, ಇತರ ಶಸ್ತ್ರಾಸ್ತ್ರಗಳು ಮತ್ತಿತರ ಉಪಕರಣಗಳಿಗೆ ಯಾವ ರೀತಿಯಲ್ಲೂ ಖರ್ಚು ಮಾಡುತ್ತಿಲ್ಲ. ಜನಸಾಮಾನ್ಯರನ್ನು ಉದ್ಧಾರ ಮಾಡುತ್ತೇವೆ ಆರ್ಯಭಟದಲ್ಲಿ ಕಳಿಸುತ್ತೇವೆ ಎಂದು ಹೇಳುವ ತಾವು ಹೆಚ್ಚು ಹಣವನ್ನು ಔಷಧಿಗೆ ಮತ್ತಿತರ ಉಪಕರಣಗಳಿಗೆ ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಜಿ. ಬಣಕಾರ್.—ಮಂತ್ರಿಮಂಡಲದಲ್ಲಿ ಹೇಳಿ ಔಷಧಿಗಳು ಮತ್ತು ಉಪಕರಣಗಳಿಗೆ ಯಾವ ರೀತಿಯಿಂದ ಹೆಚ್ಚಿಗೆ ಖರ್ಚು ಮಾಡಬೇಕು ಎಂಬುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ ಬೈರೇಗೌಡ,—97 ಪರ್ಸೆಂಟ್ ಸಂಬಳ ಭತ್ಯಗಳಿಗೋಸ್ಕರ ಮತ್ತು 3 ಪರ್ಸೆಂಟ್ ಔಷಧ ಖರೀದಿಗೋಸ್ಕರ ಉಪಯೋಗಿಸಿದ್ದೀರಿ. ಔಷಧಗಳಿಲ್ಲದೆ ನಮ್ಮ ಸಿಬ್ಬಂದಿ ವರ್ಗ ಏನು ಕೆಲಸ ಮಾಡುತ್ತಿದ್ದರು ?

ಶ್ರೀ ಬಿ. ಜಿ. ಬಣಕಾರ್.—ಬಜೆಟ್ಟಿನಲ್ಲಿ ಪ್ರಾವಿಷನ್ ಮಾಡಿದ್ದು ಅದರ ಪ್ರಕಾರ 26 ರಿಂದ 30 ಲಕ್ಷ ರೂಪಾಯಿವರೆಗೆ ಕೊಟ್ಟಿದ್ದೇವೆ. ಇನ್ನು ಮುಂದೆ ಹೆಚ್ಚಿಗೆ ಹಣ ಔಷಧಿ ನಲುವಾಗಿ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡೋಣ.

ಶ್ರೀ ಸಿ. ಬೈರೇಗೌಡ.—ಔಷಧ ಇಲ್ಲದೆ ಏನು ಕೆಲಸ ಮಾಡುತ್ತಿದ್ದರು ಎಂದು ನಾವು ಕೇಳಿದ್ದು. ಬರೀ ಸಂಬಳಕ್ಕೋಸ್ಕರ ಇದ್ದಾರೆಯೇ ಅಥವಾ ಏನಾದರೂ ಕೆಲಸ ಮಾಡಿದ್ದಾರೆಯೇ?

ಶ್ರೀ ಬಿ. ಜಿ. ಬಣಕಾರ್.—ಆ ತಾಲ್ಲೂಕಿನಲ್ಲಿ 2 ಆಸ್ಪತ್ರೆಗಳಿವೆ. 13 ರೂರಲ್ ವೆಟರ್ನರಿ ಡಿಸ್ಪೆನ್ಸರಿಗಳಿವೆ. ಆ ಆಸ್ಪತ್ರೆಯಲ್ಲಿ ಯಾರೇ ರೈತರು ದನಕರುಗಳನ್ನು ತೆಗೆದುಕೊಂಡು ಹೋದರೂ ಅವುಗಳಿಗೆ ಚಿಕಿತ್ಸೆ ಮಾಡಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಚಿಕಿತ್ಸೆಗೆ ಔಷಧವೇ ಇಲ್ಲವಲ್ಲ, ಏನು ಚಿಕಿತ್ಸೆ ಮಾಡಿದ್ದಾರೆ?

ಶ್ರೀ ಬಿ. ಜಿ. ಬಣಕಾರ್. ನಾವು ಎಷ್ಟು ಔಷಧಿ ಸಪ್ಲೈ ಮಾಡಿದ್ದೆವೋ ಅಷ್ಟು ಕೊಟ್ಟು ಚಿಕಿತ್ಸೆ ಮಾಡಿದ್ದಾರೆ. ನೀವು ಹೇಳಿದ ಹಾಗೆ ಮುಂದಿನ ಸಲ ಹೆಚ್ಚಿಗೆ ಔಷಧವನ್ನು ಸಪ್ಲೈ ಮಾಡುವ ವ್ಯವಸ್ಥೆ ಮಾಡೋಣ.

Promotion to Sub-Division Officers.

243. FRI S. M. SHEERNALY CHANDRASHEKAR (Hosanagar).—Will the Minister for Public Works be pleased to state.

(*a*) the number of sub-division officers appointed in old Mysore State are still working as Assistant Engineers;

(*b*) the reasons for not promoting them to higher posts;

(*c*) the steps taken to promote these officers in the existing vacancies ?

SRI M. MALLIKARJUNA SWAMY (Minister for Public Works).—

(*a*) Nil.

(*b*) and (*c*) Does not arise in view of the reply furnished to item (*a*).

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್—ನಾನು ಪ್ರಶ್ನೆ ಕೇಳುವಾಗ ಆ ವಿಭಾಗದ ಅಧಿಕಾರಿಗಳಾಗಿ ನೇಮಕಗೊಂಡಿರುವವರ ಪೈಕಿ ಇನ್ನೂ ಸಹಾಯಕ ಇಂಜಿನಿಯರುಗಳಾಗಿ ಕೆಲಸ ಮಾಡುತ್ತಿರುವವರು ಇದ್ದಾರೆಯೇ ಎಂದು ಕೇಳಿದ್ದಕ್ಕೆ ಅಂಥವರು ಯಾರು ಇಲ್ಲವೆಂದು ಹೇಳಿದ್ದೀರಿ. ಆದರೆ ಇದೇ ಊರಿನ ಚೀಫ್ ಎಂಜಿನಿಯರ್‌ರವರ ಕಛೇರಿಯಲ್ಲಿ ಅದೇ ಹುದ್ದೆಯಲ್ಲಿ ಮುಂದು ವರಿಯುತ್ತಿದ್ದಾರೆಂಬುದನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ—ರಾಜ್ಯದ ಪುನರ್ವಿಂಗಡಣೆಯಾಗುವುದಕ್ಕೆ ಮೊದಲು ಲೋಕೋಪಯೋಗಿ ಇಲಾಖೆಯಲ್ಲಿ ಉಪ ವಿಭಾಗಾಧಿಕಾರಿಗಳನ್ನು ನೇಮಿಸಲಿಕ್ಕೆ ಅವಕಾಶ ಇರಲಿಲ್ಲ ವಾದ್ದರಿಂದ ಯಾರನ್ನೂ ಮಾಡಲಿಲ್ಲ ಎಂದು ಹೇಳಿದ್ದು.